ಟಿಕೇಟು ಕಾಯ್ದಿರಿಸುವಿಕೆ ಬಗ್ಗೆ ಪ್ರಯಾಣಿಕರಿಗೆ ಸೌಲಭ್ಯ ಒದಗಿಸುತ್ತಿಲ್ಲ. ಅಲ್ಲದೆ. ಈ ಬಸ್ಸು ಈ ವೇಳೆ ಹೇಳಿದ ಬಸ್ಸು ಈ ಸಮಯದಲ್ಲಿ ಬೆಂಗಳೂರಿನಿಂದ ಹೊರಡುತ್ತಿರುವ ಬಗ್ಗೆ ಕೂಡ ಕೇಳಿದರೂ ತಿಳಿಸುತ್ತಿಲ್ಲ, ಬದಲಾಗಿ ಈ ಬಸ್ಸು ಪ್ರಾರಂಭವಾದಂದಿನಿಂದ ಈತನಕ ಒಂದು ದಿನವೂ ಬಿಡದೆ ಹೋಗುತ್ತಾ, ಬರುತ್ತಾ ಇದ್ದರೂ ಈ ಸಮಯದಲ್ಲಿ ಒಂದು ಬಸ್ಸು ಇದೆ ಎಂದು ಹೇಳುವ ಬದಲು ಆ ಬಸ್ಸು ಹೋಗುವ ಬರುವ ಬಗ್ಗೆ ಖಾತ್ರಿ ಇಲ್ಲ, ಬಂದರೆ ಹೋಗಬಹುದು, ಬರುವುದು ಧೈರ್ಯವಿಲ್ಲ ಎಂದು ತಪ್ಪು ಮಾಹಿತಿ ನೀಡುತ್ತಿರುವುದು. ಅಲ್ಲದೆ, ಸದ್ರಿ ಬಸ್ಸಿನ ಬಗ್ಗೆ ಬೆಂಗಳೂರಿನಲ್ಲಿ ಟಿಕೇಟು ಮುಂಗಡ ಕಾಯ್ದಿರಿಸುವಿಕೆಗೆ ಸತತವಾಗಿ ೬ ತಿಂಗಳಿನಿಂದಲೂ ಸಂಬಂಧಪಟ್ಟ ಸಚಿವರಿಗೆ, ಅಧ್ಯಕ್ಷರಿಗೆ, ಸಿ.ಟಿ.ಎಂ.ರವರಿಗೆ ಬರೆದುಕೊಂಡರೂ ಟಿಕೇಟು ಮುಂಗಡ ಕಾಯ್ದಿರಿಸುವಿಕೆ ಕ್ರಮ ಮತ್ತು ಈ ಬಸ್ಸಿನ ಬಗ್ಗೆ ಇಲಾಖೆಯವರು ನಿರ್ಲಕ್ಷ್ಯ ಭಾವನೆ ತೋರುತ್ತಿರುವ ಔಚಿತ್ಯವೇನು ಎಂದು ತಿಳಿಯಬಯಸುತ್ತೇನೆ. ಮತ್ತು ಪುತ್ತೂರು ಬೆಳ್ಳಾರೆ, ಸುಳ್ಯ, ಮಡಿಕೇರಿ, ಮೈಸೂರು, ಬೆಂಗಳೂರು ಮಾರ್ಗಕ್ಕೆ ನೀಡಿದ ಹೊಸ ಸೆಮಿ ಲಕ್ಸುರಿ ಬಸ್ಸುಗಳು ಎರಡನ್ನು ಮಂಗಳೂರು ಡಿವಿಜನ್ನಿನ ರಾಜ್ಯ ರಸ್ತೆ ಇಲಾಖೆಯವರು ಓಡಿಸದೆ, ಬದಲಾಗಿ ಈ ಹೊಸ ಬಸ್ಸುಗಳನ್ನು ಮಂಗಳೂರು, ಮಂಗಳೂರು–ಬೊಂಬಾಯಿ, ಗೋವಾ ಗಳಿಗೆ ಬದಲಾಯಿಸಿರುವ ಉದ್ದೇಶವೇನು ?

ಕರ್ನಾಟಕ ರಾಜ್ಯ ರಸ್ತೆಯ ಬಸ್ಸುಗಳೆಲ್ಲಾ ಒಂದೇ ಆದರೂ, ಪುತ್ತೂರು ಡಿಪೋ ಮಂಗಳೂರು ಡಿಪೋ ಬೆಂಗಳೂರು ಡಿಪೋ ಎನ್ನುವ ಭೇದಭಾವದ ವರ್ತನೆ ಇಲಾಖೆ ಸಿಬ್ಬಂದಿಗಳಿಂದ ನಡೆಯುತ್ತಿರುವುದು ಶೋಚನೀಯ ಸಂಗತಿ. ಮತ್ತು ಎಲ್ಲಾ ರಾಜ್ಯ ರಸ್ತೆಯ ಪಕ್ಕದಲ್ಲಿ ಹಗಲು–ರಾತ್ರಿ ತೆರೆದಿರುತ್ತಿದ್ದಂತೆ ಚಾ–ಕಾಫಿ ಪಾನೀಯ ಹಾಗೂ ಉಪಹಾರ ಗೃಹಗಳನ್ನು ವಿದ್ಯುಚ್ಛಕ್ತಿ ಅಭಾವದ ಕುರಿತು ರಾತ್ರಿ ೧೦–೩೦ ಗಂಟೆಗೆ ಮುಚ್ಚಲೇಬೇಕು ಎಂದು ಸರಕಾರ ಆದೇಶ ನೀಡಿರುವುದು, ಇದರಿಂದ ದೂರ ಪ್ರಯಾಣದ ರಾಜ್ಯರಸ್ತೆ ಸಾರಿಗೆ ಸಂಸ್ಥೆ ಖಾಸಗಿ ಬಸ್ಸುಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರಿಗೆ ದಾರಿಯಲ್ಲಿ ರಾಜ್ಯ ರಸ್ತೆಯಲ್ಲಿ ತಿಂಡಿ ತಿನಿಸು ಚಾ ಪಾನೀಯ ವಗೈರೆ ಕುಡಿಯಲು, ಉಪಹಾರ ಸಿಗದೆ ತೊಂದರೆ ಆಗಿದೆ. ಆದುದರಿಂದ ರಾಜ್ಯ ರಸ್ತೆಯ ಪಕ್ಕದಲ್ಲಿ ಹಲವು ಕಡೆಗಳಲ್ಲಿ ಈ ಹಿಂದೆ ರಾತ್ರಿ ಹೊತ್ತು ತೆರೆದಿರುತ್ತಿದ್ದ ಅಂಗಡಿಗಳನ್ನು ಕಡಿಮೆ ಪಕ್ಷ ರಾತ್ರಿ ೧೨–೦೦ ರಿಂದ ೧–೦೦ ಗಂಟೆ ತನಕವಾದರೂ ತೆರೆದಿರುವಂತೆ ಮಾಡುವುದು ಮತ್ತು ಮೇಲಿನ ಎಲ್ಲಾ ವಿಷಯಗಳಕುರಿತು ಸೂಕ್ತ ಕ್ರಮ ಕೈಕೊಂಡು ವ್ಯವಸ್ಥೆ ಮಾಡುವಂತೆ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸಂಚಾರ ನಿಯಂತ್ರಣಾ ಕಛೇರಿಯಲ್ಲಿ ಶ್ರೀಯುತ ಸತ್ಯನಾರಾಯಣ ಹಾಗೂ ಶ್ರೀಯುತ. ಶ್ರೀನಿವಾಸರವರು, ಸಂಚಾರ ನಿಯಂತ್ರಕರಾಗಿದ್ದು ಇವರಿಗೆ ಸಾರ್ವಜನಿಕರೊಂದಿಗೆ ಸಂಯಮದಿಂದ ವರ್ತಿಸುವಂತೆ ಹಾಗೂ ಈ ಬಗ್ಗೆ ಯಾವುದೇ ದೂರುಗಳಿಗೆ ಅವಕಾಶ ನೀಡದಿರುವಂತೆ ಸೂಕ್ತ ಶಿಳುವಳಿಕೆ ನೀಡಲಾಗಿದೆ.

ಪುತ್ತೂರಿನಿಂದ ಮೂಡಿಗೆರೆಗೆ ಸೆಮಿ ಲಕ್ಷುರಿ ವಾಹನದ ಅವಶ್ಯಕತೆ ಇರುವುದಿಲ್ಲ. ಪುತ್ತೂರಿನಿಂದ ಮೂಡಿಗೆರೆಗೆ ಪ್ರಯಾಣಿಸಲಿಚ್ಛಿಸುವ ಪ್ರಯಾಣಿಕರು ಪುತ್ತೂರಿನಿಂದ ಉಪ್ಪಿನಂಗಡಿ ಮಾರ್ಗವಾಗಿ ಗರಂವಾಯನಕೆರೆ ಅಥವಾ ಬೆಳ್ತಂಗಡಿಯಲ್ಲಿ ಮುಂಗಳೂರಿನಿಂದ ಮೂಡಿಗೆರೆಗೆ ಹೋಗುವ ವಾಹನಗಳಲ್ಲಿ ಪ್ರಯಾಣಿಸಬಹುದಾಗಿದೆ.

14 ತಿಪಟೂರು ತಾಲ್ಲೂಕಿನ ಕಿಬ್ಬನ ಹಳ್ಳಿ ಗ್ರಾಮದಲ್ಲಿ ಪ್ರಾಥಮಿಕ ಶಾಲೆಯನ್ನು ಸ್ಥಾಪಿಸುವುದು.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೆ, ನನ್ನ ಕ್ಷೇತ್ರಕ್ಕೆ ಸೇರಿದ ತಿಪಟೂರು ತಾಲ್ಲೂಕಿನ ಕಿಬ್ಬನ–ಹಳ್ಳಿ ಹೋಬಳಿಯಲ್ಲಿ ಳಲೆ ಹಿಂದುಳಿದ ಗೊಲ್ಲ ಜನಾಂಗದವರು ವಾಸಿಸುವ ಜಯಂತಿ ಗ್ರಾಮ ಎಂಬ ಒಂದು ಹಿಂದುಳಿದ ಗ್ರಾಮ ಇದೆ. ಈ ಗ್ರಾಮದಲ್ಲಿ ಶಿಕ್ಷಣ ಬಯಸುವ ಸುಮಾರು ೬೦ ಮಕ್ಕಳಿದ್ದು ಶಾಲೆಗೆ ಬರುವ ೧೦ ಮಕ್ಕಳು ಬಂದರೂ ಸಹ ಪ್ರಾಥಮಿಕ ಶಾಲೆಯನ್ನು ನಡೆಸಬೇಕೆಂಬ ಸರ್ಕಾರದ ಆದೇಶ ಇದ್ದರೂ ಸಹ ಹೀಗೆ ೧೫ ವರ್ಷಗಳಿಂದ ನಡೆದುಕೊಂಡು ಬಂದಿದ್ದ ಪ್ರಾಥಮಿಕ ಶಾಲೆಯನ್ನು ಈ ವರ್ಷ ಪ್ರಾರಂಭದಿಂದ ಮುಚ್ಚಲಾಗಿದೆ. ಈ ಶಾಲೆಯನ್ನು ಮುಚ್ಚಲು ಅಲ್ಲಿ ಕೆಲಸ ಮಾಡುತ್ತಿದ್ದ ಮುಂದುವರಿದ ಕೋಮಿನ ಉಪಾಧ್ಯಾಯರ ಚಿತಾವಣೆ ಕಾರಣವೆಂದು ಆ ಗ್ರಾಮದಲ್ಲಿ ಜನರು ನನ್ನಲ್ಲಿಗೆ ಬಂದು

ಶಾಲೆಯನ್ನು ಪುನಃ ಆರಂಭಿಸಬೇಕೆಂದು ಇಲ್ಲದಿದ್ದಲ್ಲಿ ನಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಂ ವುದೆಂದು ತಿಳಿಸಿದರು. ಅವರ ಮನವಿಯಂತೆ ಪ್ರಾಥಮಿಕ ಶಿಕ್ಷಣದ ಸಚಿವರಾದ ಸೋಮಂಶೇಖರ್ ರವರಿಗೆ ನಾನೂ ಲಿಖಿತಮೂಲಕ ಮನವಿ ಮಾಡಿದ್ದೇನೆ. ಸಚಿವರು ತಕ್ಷಣ ಶಾಲೆಯನ್ನು ಪ್ರಾರಂಭಿಸು ವಂತೆ ಕ್ರಮ ಕೈಗೊಳ್ಳಲು ತುಮಕೂರು ಜಿಲ್ಲಾ ವಿದ್ಯಾಧಿಕಾರಿಗಳಿಗೆ ಆದೇಶ ಕೊಟ್ಟಿರುತ್ತಾರೆ. ಆದಾಗ್ಯೂ ಸಹ ಶಾಲೆ ಪ್ರಾರಂಭವಾಗಿರುವುದಿಲ್ಲ. ಈ ಗ್ರಾಮದ ಜನರು ತಿಪಟೂರು ತಾಲ್ಲೂಕು ಸಹಾಯಕ ಶಿಕ್ಷಣಾಧಿಕಾರಿಗಳಲ್ಲಿ ಹೋಗಿ ಕೇಳಲು, ಯಾರೇ ಹೇಳಿದರು ನಿಮ್ಮ ಊರಿಗೆ ನಾನು ಶಾಲೆಯನ್ನು ಕೊಡುವುದಿಲ್ಲ ಎಂದು ಹೇಳಿರುತ್ತಾರೆ. ಮಾನ್ಯ ಸಚಿವರು ತಾವೇ ಖುದ್ದಾಗಿ ಈ ಗ್ರಾಮಕ್ಕೆ ಭೇಟಿ ಕೊಟ್ಟು ಮಕ್ಕಳ ಸಂಖ್ಯೆಯನ್ನು ಗಮನಿಸಿ ತಕ್ಷಣ ಶಾಲೆಯನ್ನು ಪ್ರಾರಂಭಿಸಿ ತಮ್ಮ ಆದೇಶವನ್ನು ಕಡೆಗಣಿಸಿರುವ ಸಹಾಯಕ ಶಿಕ್ಷಣಾಧಿಕಾರಿಯವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರನ್ನು ಹೇಳಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟ ಮಾನ್ಯ ಸಚಿವರು ಮೇಲ್ಮನೆಯಲ್ಲಿ ದ್ದಾರೆ. ಆದ್ದರಿಂದ, ಈ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಿಸುವುದಕ್ಕೆ ಸೂಕ್ತವಾದ ಆದೇಶ ಕೊಡಲಿಕ್ಕೆ ತಿಳಿಸಿ ಆ ಮೂಲಕ ನಾನು ಏರ್ಪಾಡು ಮಾಡುತ್ತೇನೆ.

15 ಚಿಂಚೋಳಿ ತಾಲ್ಲೂಕಿನಲ್ಲಿ ಹಾಲಿನ ಕೇಂದ್ರವನ್ನು ತೆರೆಯುವುದು

ಶ್ರೀ ಎಂ. ವೀರಯ್ಯಸ್ವಾಮಿ.- ಸುಮಾರು ಐದಾರು ವರ್ಷಗಳ ಹಿಂದೆ ಚಿಂಚೋಳಿ ತಾಲ್ಲೂಕಿನಲ್ಲಿ ಹಾಲಿನ ಕೇಂದ್ರ ಪ್ರಾರಂಭಿಸುವ ಇಚ್ಛೆಯಿಂದ ಜಿಲ್ಲಾ ಗ್ರಾಮಿಣಾಭಿವೃದ್ಧಿ ಸಂಘದ ವತಿಯಿಂದ ಸುಲೇ ಪೇಟೆ ಗ್ರಾಮದಲ್ಲಿ ಶೀತಲೀಕರಣ ಯಂತ್ರವನ್ನು ಸ್ಥಾಪಿಸಲಾಯಿತು. ಪ್ರಾರಂಭದಿಂದಲೂ ಇಲ್ಲಿಯ ವರೆಗೆ ತಾಲ್ಲೂಕಿನ ಜನ ಹಾಲಿನ ಕೇಂದ್ರದ ನಿರೀಕ್ಷೆ ಮಾಡುತ್ತಲೇ ಇದ್ದಾರೆ. ಆದರೆ ಇನ್ನೂ ಹಾಲಿನ ಕೇಂದ್ರ ಪ್ರಾರಂಭವಾಗಿಲ್ಲ. ಸ್ಥಾಪಿಸಿರುವ ಶೀತಲೀಕರಣ ಯಂತ್ರ ಇದ್ದಲ್ಲಿಯೇ ತುಕ್ಕು ಹಿಡಿದು ಹೋಗುತ್ತಿದೆ. ಮಾನ್ಯ ಸಹಕಾರ ಮಂತ್ರಿಗಳು ಜಿಲ್ಲೆಯ ಹಾಲಿನ ಉತ್ಪಾದಕರ ಸಂಘಕ್ಕೆ ಕೂಡಲೇ ಹಾಲಿನ ಕೇಂದ್ರ ತೆಗೆಯುವುದರ ಜೊತೆಗೆ ತಾಲ್ಲೂಕಿನ ರೈತರಲ್ಲಿ ಹಾಲಿನ ಉತ್ಪಾದನಾ ಚಟುವಟಿಕೆಯನ್ನು ವೃದ್ಧಿಗೊಳಿಸಬೇಕಾಗಿ ಸೂಚನೆ ಕೊಡಬೇಕಾಗಿ ಹಾಗೂ ತುಕ್ಕು ಹಿಡಿಯುತ್ತಿರುವ ಶೀಥಲೀಕರಣ ಯಂತ್ರ ವನ್ನು ಉಪಯೋಗಕ್ಕೆ ತೆಗೆದುಕೊಳ್ಳಬೇಕಾಗಿ ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ವೈಕೆ. ರಾಮಯ್ಯ.—ಅಧ್ಯಕ್ಷರೆ, ಮಾನ್ಯ ಸಚಿವರಾದ ಸಿದ್ದರಾಮಯ್ಯನವರು ಇಲ್ಲಿ ಇಲ್ಲದೇ ಇರುವುದರಿಂದ, ಈ ಉತ್ತರವನ್ನು ಓದಲಿಕ್ಕೆ ತಮ್ಮ ಅಪ್ಪಣೆಯನ್ನು ಪಡೆದು ಓದಬೇಕಾಗಿದೆ.

ಅಧ್ಯಕ್ಷರೆ, ಸೂಲೇಪೇಟೆ ಗ್ರಾಮದಲ್ಲಿ ಶೀತಲೀಕರಣ ಕೇಂದ್ರವನ್ನು ಸ್ಥಾಪಿಸಲು ಬೇಕಾಗಿರುವ ಯಂತ್ರೋಪಕರಣಗಳನ್ನು ಜಿಲ್ಲಾ ಗ್ರಾಮೀಣಾ ಅಭಿವೃದ್ಧಿ ಸಂಘವು ಈ ಹಿಂದೆ ಪೂರೈಸಿದ್ದು ಅವನ್ನು ಅಲ್ಲಿನ ಹಾಲು ಉತ್ಪಾದಕರ ಸಹಕಾರಿ ಸಂಘದಲ್ಲಿ ಇಡಲಾಗಿದೆ. ನೀರಿನ ಅಭಾವ ಹಾಗೂ ಸಂಪರ್ಕ ತೊಂದರೆಯಿಂದಾಗಿ ಶೀಥಲೀಕರಣ ಕೇಂದ್ರವನ್ನು ಪ್ರಾರಂಭಿಸಲು ಸಾಧ್ಯವಾಗಲಿಲ್ಲ. ಅಲ್ಲಿ ಕೊಳವೆ ಬಾವಿಯನ್ನು ತೋಡಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಹಾಗೂ ಒಂದು ವೇಳೆನೀರು ಸಾಕಷ್ಟು ಪ್ರಮಾಣದಲ್ಲಿ ಸಿಗದ ಪಕ್ಷದಲ್ಲಿ ಆ ಶೀಥಲೀಕರಣ ಕೇಂದ್ರವನ್ನು ಬೇರೆಡೆಗೆ ಸ್ಥಾಪಿಸಬೇಕಾಗುತ್ತದೆ. ಅದಷ್ಟು ಬೇಗ ಕ್ರಮ ಜರುಗಿಸಲಾಗುವುದು.

೧೬ ಹುನಗುಂದ ತಾಲ್ಲೂಕಿನಲ್ಲಿ ರಾವ ಧಾಳ ನೀರಾವರಿ ಯೋಜನೆಯ ಪಂಪ್‌ಸೆಟ್ಟುಗಳ ರಿಪೇರಿ ಮತ್ತು ಕರ,ಭಾರವನ್ನು ಹಾಕದಂತೆ ಸೂಚಿಸುವುದು

ಶ್ರೀ ಎಸ್.ಜಿ. ಸಂಜಯ್ಯನವರ್ (ಗುಳೇದಗುಡ್ಡ) ಮಾನ್ಯ ಅಧ್ಯಕ್ಷರೆ ನನ್ನ ಮಂತಕ್ಷೇತ್ರದ ಹುನಗುಂದ ತಾಲ್ಲೂಕಿನ ರಾಮದಾಳ ಯಾತ ನೀರಾವರಿ ಯೋಜನೆಯಲ್ಲಿ ಎರಡು ಸುಪುಸೆಟ್ಟುಗಳು ಕೆಲವು ತಿಂಗಳ ಹಿಂದೆಯೇ ಕೆಟ್ಟು ಹೋಗಿ ಇನ್ನೂ ರಿಪೇರಿ ಆಗಿರುವುದಿಲ್ಲ. ಇದರಿಂದ ರೈತರಿಗೆ ತೊಂದರೆಯಾಗಿರುವುದಲ್ಲದೆ ಈ ಯೋಜನೆಯಿಂದ ನೀರಿನ ದೊರಕದ ಪರಿಸ್ಥಿತಿ ಇದ್ದಾಗೂ